# ವರನಟನ ಮುಂದೆ ಮಾತೇ ಹೊರಡಲಿಲ್ಲ



**'ರಾಜಕುಮಾರ್ ಅವರ ಮನೆಗೆ ಹೋಗುವ ಸುಯೋಗ ನನಗೆ ಒದಗಿ ಬಂದು ಅವರನ್ನು ಭೇಟಿಯಾದಾಗ 'ಇವರು ನನ್ನೊಬ್ಬನದೇ ಆಸ್ತಿ' ಎಂಬಂತೆ ಅವರ ಕೈಹಿಡಿದುಕೊಂಡೇ ಇದ್ದೆ. ಅವರ ಮುಖ ಹಾವ–ಭಾವ, ಮಧುರ ಧ್ವನಿ... ಇವುಗಳನ್ನೆಲ್ಲ ನೋಡುತ್ತಾ, ಕೇಳುತ್ತಾ ನಾನಲ್ಲಿಯೇ ಕಳೆದುಹೋಗಿದ್ದೆ..!**

■ ರವೀಂದ್ರ ಬನ್ನಾಡಿ ಬೆಂಗಳೂರು

ವರನಟ ಡಾ.ರಾಜಕುಮಾರ್ ಎಂದರೆ ಎಲ್ಲರಿಗೂ ಎಲ್ಲಿಲ್ಲದ ಗೌರವ, ಅಭಿಮಾನ, ಪ್ರೀತಿ. ಇದಕ್ಕೆ ಕಾರಣ ಅವರ ಅಪ್ರತಿಮ ನಟನೆ, ಅದ್ಭುತ ಪ್ರತಿಭೆ. ಗಾಯನ, ಅಭಿನಯ ಸೇರಿದಂತೆ ಚಿತ್ರರಂಗದ ಮಟ್ಟಿಗಂತೂ ಅವರು ಸಾಧನೆಯ ಶಿಖರ! ಅವರು ಮಾತಿಗೆ ಸಿಕ್ಕುವುದಿರಲಿ, ನೋಟಕ್ಕೆ ಸಿಕ್ಕಿದರೇ ಪುನೀತರಾದೆವೆಂಬ ಭಾವ ಅನೇಕ ಕನ್ನಡಿಗರಲ್ಲಿತ್ತು. ಇದಕ್ಕೆ ಕಾರಣ ಅವರು ಕನ್ನಡಿಗರಲ್ಲಿ ಇಟ್ಟಿದ್ದ ಅಪಾರ ಅಭಿಮಾನ, ಪ್ರೀತಿ.

ಅಂದು ಜನವರಿ 1, 2001. ಹೊಸ ವರ್ಷದ ಪಾದಾರ್ಪಣೆ. ನನ್ನ ಆತ್ಮೀಯ ಮಿತ್ರರೊಬ್ಬರಿಂದ ಶುಭಾಶಯದ ಸಂದೇಶ ಜೊತೆಗೆ ಒಂದು ವಿಶೇಷ ಆಹ್ವಾನ. 'ನಾವು ಸ್ವಲ್ಪ ಜನ ಇಂದು ಡಾ. ರಾಜಕುಮಾರ್ ಅವರ ಮನೆಗೆ ಹೋಗುತ್ತಿದ್ದೇವೆ. ನೀವೂ ಬನ್ನಿ' ಎಂದರು. ನಾನು ರಾಜಕುಮಾರ್ ಅವರ ಕಟ್ಟಾ ಅಭಿಮಾನಿ ಎಂಬುದು ಅವರಿಗೆ ಗೊತ್ತಿತ್ತು. ಏನೋ ತಮಾಷೆ ಮಾಡುತ್ತಿದ್ದಾರೆ ಎಂದುಕೊಂಡು ಸುಮ್ಮನೆ ನಕ್ಕೆ. ಆದರೆ ಅದು ತಮಾಷೆಯಾಗಿರಲಿಲ್ಲ. ಅಪ್ಪಟ ಸತ್ಯ..! ಒಂದು ಕ್ಷಣ ರೋಮಾಂಚನ, ಸಂತೋಷ.

ಬಾಲ್ಯದಿಂದಲೇ ರಾಜ್ ಸಿನಿಮಾಗಳ ಸೆಳೆತಕ್ಕೆ ಒಳಗಾಗಿದ್ದು, ಅವರ ಅಭಿನಯಕ್ಕೆ ಮಾರುಹೋಗಿದ್ದು, ಹೈಸ್ಕೂಲು ಕಾಲೇಜು ದಿನಗಳಲ್ಲಿ ಮೊದಲ ದಿನದ ಮೊದಲ ಶೋ ನೋಡಲು ಕುಂದಾಪುರದಿಂದ ಮಂಗಳೂರಿಗೆ ಹೋಗುತ್ತಿದ್ದದ್ದು, ಹಾಡುಗಳಿಗೆ ಮರುಳಾಗಿ ಉಡುಪಿಯಲ್ಲಿ ರಾಜ್ ರಸ ಸಂಜೆಯ ನೂಕುನುಗ್ಗಲಿನಲ್ಲಿ ಪೊಲೀಸರಿಂದ ಲಾಠಿ ರುಚಿ ತಿಂದಿದ್ದು, ಬೆಂಗಳೂರಿಗೆ ಬಂದ ಮೇಲೆ ಅವಕಾಶ ಸಿಕ್ಕಾಗಲೆಲ್ಲ ಅವರನ್ನು ಹತ್ತಿರದಿಂದ ನೋಡಿದ್ದು... ಕೊನೆಗೆ ಎಲ್ಲಕ್ಕಿಂತ ಮುಖ್ಯವಾಗಿ ಅವರ ವ್ಯಕ್ತಿತ್ವವೇ ನನ್ನ ಜೀವನದ ಆದರ್ಶವಾಗಿದ್ದು... ಈ ಎಲ್ಲಾ ನೆನಪುಗಳು ಮನದಾಳದಲ್ಲಿ ಜೀವಂತವಾಗಿದ್ದವು.

ಮುಂದಿನ ಕೆಲವೇ ಗಂಟೆಗಳಲ್ಲಿ ನಾವು ರಾಜ್ ಅವರ ಮನೆಯ ಮುಂದಿದ್ದೆವು. ಕೆಲವು ತಿಂಗಳ ಹಿಂದೆ ವೀರಪ್ಪನ್‌ನಿಂದ ಬಿಡುಗಡೆಯಾಗಿ ಬಂದಿದ್ದರಿಂದ ರಾಜ್ ಮನೆಗೆ ಬಿಗಿ ಕಾವಲಿತ್ತು. ನಾವು ಸಹ್ಯಾದ್ರಿ ಸಂಘದ ಕಡೆಯಿಂದ ಮೊದಲೇ ಸಮಯ ನಿಗದಿಯಾದ್ದರಿಂದ ನಿರಾಳವಾಗಿದ್ದೆವು. ಮನೆಯ ಒಳಗೆ ಕಾಲಿಡುತ್ತಿದ್ದಂತೆ ಏನೋ ಭಾವ ತೀವ್ರತೆ. ಬಾಲ್ಯದಿಂದ ಮನಸ್ಸಿಗೆ ಹಚ್ಚಿಕೊಂಡು ಬಂದಿದ್ದ ದೈತ್ಯ ವ್ಯಕ್ತಿಯ ಮನೆಯೊಳಗೇ ನಾನಿದ್ದೇನೆಯೇ..! ಇನ್ನು ಕೆಲವೇ ನಿಮಿಷಗಳಲ್ಲಿ ಅವರು ನನ್ನೆದುರು ಇರುವರೇ..! ನಿಜಕ್ಕೂ ನಂಬಲಾಗದ ಖುಷಿಯ ಕ್ಷಣವದು. ಮನೆಯೊಳಗೆ ನಮ್ಮನ್ನು ಹೆಚ್ಚು ಹೊತ್ತು ಕಾಯಿಸದ ರಾಜ್ ತಮ್ಮ ಎಂದಿನ ಕೊಕ್ಕರೆ ಗರಿಯಂತಹ ಬಿಳಿ ಉಡುಗೆಯೊಂದಿಗೆ ಮತ್ತು ಶುಭ್ರ ನಗೆಯೊಂದಿಗೆ ಆತ್ಮೀಯವಾಗಿ ಬರಮಾಡಿಕೊಂಡರು. ಎಲ್ಲರೂ ಸಂಭ್ರಮಿಸಿದರು, ಬೆರೆತರು, ಮಾತುಕತೆ ಎಲ್ಲಾ ನಡೆಯುತ್ತಲೇ ಇತ್ತು. ಆದರೆ ನಾನು ಮಾತ್ರ ಬಹಳ ಹೊತ್ತು 'ಇವರು ನನ್ನೊಬ್ಬನದೇ ಆಸ್ತಿ' ಎಂಬಂತೆ ಅವರ ಕೈಹಿಡಿದುಕೊಂಡೇ ಇದ್ದೆ. ಅವರ ಮುಖ ಹಾವ–ಭಾವ, ಮಧುರ ಧ್ವನಿ... ಇವುಗಳನ್ನೆಲ್ಲ ನೋಡುತ್ತಾ, ಕೇಳುತ್ತಾ ಕಳೆದುಹೋಗಿದ್ದೆ. ಏನು ಮಾತನಾಡಬೇಕು ಎಂದು ಗೊತ್ತಾಗಲೇ ಇಲ್ಲ. ಅಷ್ಟೂ ತಲ್ಲೀನನಾಗಿದ್ದೆ ನಾನು ಅವರನ್ನು ನೋಡುವುದರಲ್ಲಿ! ಅಷ್ಟರಲ್ಲೇ ಎಲ್ಲರೂ ಹೊರಟು ನಿಂತರು.

ಅವರ ಮಗ ನಟ ಪುನೀತ್ ಎಲ್ಲರಿಗೂ ಮೈಸೂರು ಪಾಕ್ ಹಂಚಿದರು. ಎಲ್ಲರೂ ಹೊರಟರು. ಆದರೆ ನಾನೊಬ್ಬ ಮಾತ್ರ ಅಲ್ಲೇ ನಿಂತಿದ್ದೆ. ರಾಜ್ ಸೂಕ್ಷ್ಮವಾಗಿ ಗಮನಿಸಿ ಹತ್ತಿರ ಬಂದು 'ಏನಾದರೂ ಮಾತನಾಡಬೇಕಿತ್ತೇ' ಎಂದರು. 'ನಾನು ನಿಮ್ಮ ಅಪ್ಪಟ ಅಭಿಮಾನಿ' ಎಂದು ಹೇಳಿಕೊಳ್ಳಲು ಮಾತಿಗಾಗಿ ಪರದಾಡಿದೆ. 'ಅದು ನನಗೆ ಆಗಲೇ ಗೊತ್ತಾಗಿತ್ತು ಬಿಡಿ...' ಎಂದು ಸ್ವಲ್ಪ ರಾಗವಾಗಿ ಅವರದೇ ಆದ ವಿಶೇಷ ಶೈಲಿಯಲ್ಲಿ ಹೇಳಿ ಸ್ನಿಗ್ಧ ನಗು ಸೂಸಿದರು. ನಾನೂ ನಕ್ಕು ನಮಸ್ಕರಿಸಿ ಬೀಳ್ಕೊಟ್ಟೆ. ಹೊರ ಬಂದ ನಂತರ ನನ್ನ ಮಿತ್ರರು ಕೇಳಿದರು.. 'ಏನು ಒಬ್ಬರೇ ತುಂಬಾ ಮಾತಾಡ್ತಾ ಇದ್ರಲ್ಲ...?' ಇದಕ್ಕೂ ನನ್ನ ನಗುವೇ ಉತ್ತರವಾಗಿತ್ತು!

ಅಂದಿನಿಂದ ಆ ಸವಿ ನೆನಪು ಮನದಂಗಳದಲ್ಲಿ ಆಗಾಗ ಮರುಕಳಿಸುತ್ತಾ ಮುದ ನೀಡುತ್ತಲೇ ಇದೆ. ರಾಜ್ ಜತೆ ಇದ್ದ ಕ್ಷಣ, ಆಡಿದ ಮಾತು ಎಲ್ಲವೂ ನನ್ನ ಪಾಲಿಗೆ ಸವಿನೆನಪಿನ ಬುತ್ತಿಯಾಗಿಯೇ ಇದೆ. ಅವರನ್ನು ಭೇಟಿ ಮಾಡಿ ಮಾತನಾಡಿದ ನಾನು ಧನ್ಯ ಎಂಬ ಭಾವ ಇನ್ನೂ ಮನದಲ್ಲಿದೆ. ■